**<u>ಸಿವಿಲ್ ಜಡ್ಜ ಹಾಗೂ ಜೆ.ಎಂ.ಎಫ್.ಸಿ. ಮುಂಡಗೋಡರವರ ನ್ಯಾಯಾಲಯದಲ್ಲಿ.</u>**

ಸಿ.ಸಿ. ನಂಬರ 156/2016

ಇ ಬಿ ಸಿ ಪಿಡಬ್ಲ್ಯೂ-1

ಸಾಕ್ಷಿದಾರರಿಗೆ ಇಂದು ದಿನಾಂಕಃ 1-2021 ರಂದು ಪ್ರಮಾಣ ವಚನ ಬೋಧಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು | ಃ ಎಲ್ಲೀಶ ಹನುಮಂತಪ್ಪ ಕೋಟ್ಯಾಳ್ |
| ತಂದೆಯ ಹೆಸರು | ಃ ಹನುಮಂತಪ್ಪ |
| ವಯಸ್ಸು | ಃ 57 ವರ್ಷ |
| ವೃತ್ತಿ | ಃ ಕಾರ್ಯ ನಿರ್ದೇಶಕ, ಲೋಟಸ್ ಶಿಕ್ಷಣ ಸಂಸ್ಥೆ |
| ವಾಸ್ತವ್ಯ | ಃ ಮುಂಡಗೋಡ. |

**<u>ಸಾಕ್ಷ್ಯವಿಚಾರಣೆ: ಶ್ರೀ ಕೆ.ಎನ್. ಹೆಗಡೆ, ಫಿರ್ಯಾದುದಾರರ ಪರ ವಕೀಲರಿಂದಃ</u>**

8 ಶಿಕ್ಷಕರು ಹಾಗೂ ಒಬ್ಬರು ಭೋದಕೇತರ ಸಿಬ್ಬಂಧಿಯ ವಿರುದ್ಧ ಫಿರ್ಯಾದನ್ನು ಕೊಟ್ಟಿರುತ್ತೇನೆ. ಅವರು ಎಲ್ಲ ಆರೋಪಿಗಳಾಗಿರುತ್ತಾರೆ. ನಾನು ಲೋಟಸ್ ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೆನು. ನಮ್ಮ ಶಿಕ್ಷಣ ಸಂಸ್ಥೆಯಲ್ಲಿ 1 ರಿಂದ 9 ನೇ ಆರೋಪಿಗಳು ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದರು. ದಿಃ 26-05-2009 ರಂದು ವೇತನಾನುದಾನ ಮಂಜೂರಾಗಿರುತ್ತದೆ. ದಿಃ 01-03-2008 ರಿಂದ 29-12-2009 ರ ತನಕ ಒಂದು ಹಾಜರಿ ಪುಸ್ತಕ ಹಾಗೂ ದಿಃ 01-03-2008 ರಿಂದ 31-02-2010 ರ ವರೆಗೆ ಇನ್ನೊಂದು ಹಾಜರಿ ಪುಸ್ತಕ ಒಟ್ಟು ಎರಡು ಹಾಜರಿ ಪುಸ್ತಕಗಳು ಇರುವುದು ಕಂಡುಬಂದಿರುತ್ತದೆ. ದಿಃ 15-01-2010 ರಂದು ಎಲ್ಲರಿಗೂ ನೋಟಿಸ್ ನೀಡಿ ಹಾಜರಾಗಬೇಕೆಂದು ತಿಳಿಸಿರುತ್ತೇನೆ. ಇವರೆಲ್ಲರು 8 ಶಿಕ್ಷಕರು ಹಾಗೂ ಒಬ್ಬರು ಶಿಕ್ಷಕೇತರ ಸಿಬ್ಬಂಧಿ ಆಗಿರುತ್ತಾರೆ. 1 ಮತ್ತು 9 ನೇ ಆರೋಪಿಗಳು ಹಾಜರಾಗಿದ್ದರು. ಉಳಿದವರು ಗೈರು ಹಾಜರಾಗಿದ್ದರು. ಆ ದಿನ ಮೀಟಿಂಗ್ ನಲ್ಲಿ ಆಡಳಿತ ಸದಸ್ಯರು ಒಟ್ಟು 6 ಜನ ಹಾಜರಿದ್ದರು. ಆ ಮೀಟಿಂಗ್ ನಲ್ಲಿ ಎರಡು ಹಾಜರಿ ಪುಸ್ತಕಗಳ ಬಗ್ಗೆ ಚರ್ಚೆ ಆಗಿರುತ್ತದೆ. 1 ನೇ ಆರೋಪಿ 2 ಹಾಜರಾತಿ ಪುಸ್ತಕಗಳನ್ನು ಹಾಜರುಪಡಿಸಿರುತ್ತಾರೆ. ಒಂದು ಮೂಲ ಹಾಜರಾತಿ ಪುಸ್ತಕವಾಗಿದ್ದು ಇನ್ನೊಂದು ಕೊಕ್ಕೆ ಹಾಜರಾತಿ ಪುಸ್ತಕವಾಗಿರುತ್ತದೆ. ಅವುಗಳು ಸಿಬ್ಬಂಧಿಗಳ ಸಂಬಂಧವಾಗಿ ಇರುವ ಹಾಜರಾತಿ ಪುಸ್ತಕಗಳು. ಒಂದು ಹಾಜರಾತಿ ಪುಸ್ತಕದಲ್ಲಿ ಸಿಬ್ಬಂಧಿಗಳು ಹಾಜರು ಆಗಿರುವ ಬಗ್ಗೆ ನಮೂದಿದ್ದು ಇನ್ನೊಂದು ಹಾಜರಾತಿ ಪುಸ್ತಕದಲ್ಲಿ ಗೈರು(absent) ಹಾಜರಾಗಿರುವ ಬಗ್ಗೆ ನಮೂದಾಗಿರುತ್ತದೆ. ದಿಃ 18-01-2010 ರಂದು ಅವರಿಗೆ ಶೋಕಾಸ್ ನೋಟಿಸ್ ಜಾರಿಯಾಗಿತ್ತು, ಅದಕ್ಕೆ ದಿಃ 31-01-2010 ರ ಒಳಗಾಗಿ ವಿವರಣೆ ಕೊಡಲು ಕೇಳಿದ್ದೆವು. ದಿಃ 05-02-2010 ರಲ್ಲಿ ಹೇಳಿಕೆಯನ್ನು ಕೊಟ್ಟಿರುತ್ತಾರೆ. ಎಲ್ಲರು ಒಂದೇ ಹಾರಿಕೆ ಉತ್ತರಗಳನ್ನು ಕೊಟ್ಟಿದ್ದರಿಂದ ಅವರ ವಿರುದ್ಧ ಆ್ಯಕ್ಷನ್ ತೆಗೆದುಕೊಳ್ಳಲು ಇಲಾಖೆಗೆ ಅನುಮತಿ ಕೇಳಿರುತ್ತೇವೆ. 5

ಜನರನ್ನು ಅಮಾನತ್ತಿನಲ್ಲಿ ಇಡಲಾಯಿತು. 3 ಜನ ಕರ್ತವ್ಯದ ಕೆಲಸಕ್ಕೆ ಹಾಜರಾಗಿರುತ್ತಾರೆ . ನಂತರ ಬೇರೆ ಸಿಬ್ಬಂಧಿಗಳಿಂದ ನಾವು ಸ್ಕೂಲನ್ನು ನಡೆಸಿಕೊಂಡು ಬಂದಿರುತ್ತೇವೆ.

ಮುಂದುವರೆದ ವಿಚಾರಣೆಗಾಗಿ ಮುಂದೂಡಲಾಯಿತು.

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ .ಹೇ.ಕೇ. ಸರಿ ಇದೆ

ಪ್ರ.ದ.ನ್ಯಾ.ದಂ. ಮುಂಡಗೋಡ.